ಮಾಡುವಂತೆ ಬಾಲೆ ಮುತ್ತಜ್ಜನ ಸುಕ್ಕು ಮುಖಕ್ಕೆ ಮುತ್ತಿಕ್ಕುತ್ತಾಳೆ. ಹಿರಿಯಜ್ಜನಿಗೆ ಕಣ್ಣೀರು ಉಕ್ಕುತ್ತವೆ. 'ನೀನು ಕವಿಯೇನು ಹಿರಿಯಜ್ಜ?' 'ಒಳ್ಳೆಯವರೆಲ್ಲ ಕವಿಗಳೇ ಕಣೇ ಪುಟಾಣಿ!' ಬಿಕ್ಕುತ್ತಾನೆ ಹಿರಿಯ. 'ನೀನು ಕವಿಯಾಗಿ ಏನೂ ಬರೀಲಿಲ್ವಲ್ಲ ಅಜ್ಜ?' 'ಕೆಲವ್ರು ಪದ್ಯ ಬರೀತಾರೆ, ಕೆಲವ್ರು ಪದ್ಯ ಓದುತ್ತಾರೆ, ಕೆಲವ್ರು ಪದ್ಯ ಬದುಕ್ತಾರೆ! ಕವಿಯು ಕಾಲಾತೀತ. ಯುಗದ ಕೊಂಡಿ. ಕವಿ ರಿಲೇ ಆಟಗಾರನಂತೆ ರಿಲೇ ದಂಡವನ್ನು ಮುಂದಿನವರಿಗೆ ಮುಟ್ಟಿಸಬೇಕು. ಅದು ಅವನ ಕರ್ತವ್ಯ.' ಇಬ್ಬರಿಗೂ ಮಾತು ನಿಂತು ಹೋಗುತ್ತದೆ. ಹೊಂಗೆ ಮರದ ಬಳಿ ತಣ್ಣಗೆ ಗಾಳಿ ಬೀಸುತ್ತದೆ.

'ತನ್ನಪ್ಪ ಮತ್ತು ಚಿಕ್ಕಪ್ಪ ವಾರಕ್ಕೆರಡು ಪೆನ್ನು ಕೊಳ್ಳುತ್ತಾರೆ, ಕಳೆಯುತ್ತಾರೆ. ಆದರೆ ಹಿರಿಯಜ್ಜ ಮಾತ್ರ ಒಂದು ಪೆನ್ನು ಕೊಂಡರೆ ವರ್ಷಗಟ್ಟಲೆ ಉಪಯೋಗಿಸುತ್ತಾನೆ. ಮನೆಯ ಎಲ್ಲರಿಗೆ ಹತ್ತಿಪ್ಪತ್ತು ಜೊತೆ ಬಟ್ಟೆ ಇವೆ. ಅಮ್ಮ, ಚಿಕ್ಕಮ್ಮರಿಗೆ ಸೀರೆ ಮತ್ತು ಡ್ರೆಸ್‌ಗಳು ನೂರಾರಿವೆ. ಆದರೆ ಹಿರಿಯಜ್ಜ ಎಂದೂ ಮೂರು ಜೊತೆಗಿನ್ನ ಹೆಚ್ಚು ಬಟ್ಟೆ ಇಟ್ಟುಕೊಂಡವನಲ್ಲ. ಅವನ ಬಟ್ಟೆಗಳು ವರ್ಷಗಟ್ಟಲೆ ಹರಿಯುವುದಿಲ್ಲ. ವಾರ ಉಟ್ಟರೂ ಮಾಸುವುದಿಲ್ಲ. ಜೇಬಿನಲ್ಲಿನ ಚಿಕ್ಕಾಸೂ ವ್ಯರ್ಥವಾಗುವುದಿಲ್ಲ. ವರ್ಷಗಳುರುಳಿದರೂ ಚಪ್ಪಲಿ ಸವೆಯುವುದಿಲ್ಲ. ಪ್ರಲೋಭನೆಗಳು ಹತ್ತಿರ ಸುಳಿಯುವುದಿಲ್ಲ. ಅವನು ಮೊದಲ ಸಂಬಳದಲ್ಲಿ ಕೊಂಡ ಕೈಗಡಿಯಾರವನ್ನು ನಿವೃತ್ತಿಯಾದ ದಿನವೂ ಕಟ್ಟಿಕೊಂಡಿದ್ದನಂತೆ. ಈಗಲೂ ಕಬ್ಬು ತಿನ್ನಬಲ್ಲ. ಅಡಿಕೆ ಕಡಿಯಬಲ್ಲ. ಕನ್ನಡಕ ಇಲ್ಲದೆ ಪುಸ್ತಕ ಓದಬಲ್ಲ. ತೋಟದಲ್ಲಿ ಮರದಿಂದ ಕಾಯಿ ಬಿದ್ದರೆ, ಯಡಮೊಟ್ಟೆ ಬಿದ್ದರೆ ಮನೆಯಿಂದಲೇ ಕೇಳಿಸಿಕೊಳ್ಳಬಲ್ಲ...' ಬಾಲೆಯ ಮನೋಲೋಕದಲ್ಲಿ ಹಲವು ಸಂಗತಿಗಳು ಸುಳಿದಾಡುತ್ತವೆ.

ಹಿರಿಯಜ್ಜ ಮತ್ತು ಬಾಲೆಯರು ಮರದಡಿಯಲ್ಲಿ ಕೂತು ಪ್ರಶಾಂತತೆಯಲ್ಲಿ ಮುಳುಗಿದ್ದರೆ ಅತ್ತ ಮನೆಯೊಳಗಡೆ ಕಿರಿಯಜ್ಜ, ಕಿರಿಯಜ್ಜಿ, ಗಂಡು ಮಕ್ಕಳು ಮತ್ತು ಸೊಸೆಯರು ಜೋರು ಮಾತುಕತೆಯಲ್ಲಿ ತೊಡಗಿದ್ದರು. ಮನೆ ಮಗ ಅಮೆರಿಕದಿಂದ ಬರುವ ಇಪ್ಪತ್ತು ದಿನದ ಒಳಗೆ ಮನೆಯ ನವೀಕರಣ ವಿಚಾರದ ಚರ್ಚೆ ನಡೆದಿತ್ತು. ಇಷ್ಟು ವರ್ಷ ಹಿರಿಯಜ್ಜ ಮನೆಗೆ ಸುಣ್ಣ ಹೊಡೆಸುತ್ತಿದ್ದ. ಈಗ ಮನೆಯವರೆಲ್ಲ ಪೈಂಟ್ ಮಾಡಿಸಬೇಕೆಂದು ನಿರ್ಧರಿಸಿದರು. ಮನೆಯ ಎಲ್ಲ ರೂಮಿಗೆ ಕಾರ್ಪೆಟ್ ಹಾಸುವುದು, ಕಿಟಕಿ, ಬಾಗಿಲುಗಳಿಗೆ ಪರದೆ, ತೀರಾ ಹಳೆಯದಾದ ಮುರಿದು ಹೋಗಿರುವ ಕುರ್ಚಿ, ಟೇಬಲ್, ಮಂಚಗಳನ್ನು ಮುರಿದೆಸೆದು ಹೊಸವನ್ನು ಮಾಡಿಸುವುದು, ವಿಶಾಲವಾಗಿರುವ ಅಡುಗೆ ಮನೆಯನ್ನು ಇಟಾಲಿಯನ್ ಕಿಚನ್ನಾಗಿ ಪರಿವರ್ತಿಸುವುದು, ಎಲ್ಲಕ್ಕೂ ಮುಖ್ಯವಾಗಿ ಮನೆಯ ಬಚ್ಚಲು, ಕಕ್ಕಸು ರೂಮನ್ನು ಕೂಡಲೇ ನವೀಕರಿಸಿ ಅತ್ಯಾಧುನಿಕ ವಾಷ್‌ರೂಮನ್ನು ಮಾಡಿಸುವುದು, ಹಿತ್ತಲಲ್ಲಿರುವ ಹೊಂಗೆ ಮರ ಕಡಿಸಿ ಮನೆಯ ಸುತ್ತಲೂ ಪಾರ್ಕಿನಂತೆ ಮಾಡುವ ಯೋಜನೆಗಳು ರೂಪುಗೊಂಡವು. ವರಾನ್ವೇಷಣೆಯ ಅನೇಕ ಕೋಟ್ಯಧಿಪತಿಗಳ ಭೇಟಿಯ ಸಮಯದಲ್ಲಿ ಮುಜುಗರ ಅನುಭವಿಸುತ್ತಿದ್ದ ಕಿರಿಯಜ್ಜ ಮತ್ತು ಎಲ್ಲರಿಗೆ ಬಹಳ ಸಂತೋಷವಾಯಿತು. ಒಪ್ಪುವುದು ಕಷ್ಟ ಎಂದರಿತು ಯಾರೂ ಹಿರಿಯಜ್ಜನ ಬಳಿ ಏನೂ ಹೇಳಲಿಲ್ಲ.

ಎಲ್ಲ ಕೆಲಸಗಳೂ ಪ್ರಾರಂಭವಾಗಿ ಶರವೇಗದಲ್ಲಿ ಸಾಗಿದವು. ಆವರಣದ ಗೋಡೆಯಿಂದ ಹಿಡಿದು ಮನೆ ರಿಪೇರಿ ಕೆಲಸಗಳೆಲ್ಲ ಮುಗಿದ ಮೇಲೆ ಹಿತ್ತಲಲ್ಲಿದ್ದ ಕಕ್ಕಸು, ಬಚ್ಚಲು ಮನೆಯ ಕೆಲಸ ಶುರುವಾಯಿತು. ಅದೊಂದು ಹಳೆಯ ಕಾಲದ ಬಚ್ಚಲು. ನೀರು ಕಾಯಿಸುವ ಹಂಡೆ, ಒಲೆ, ಹೆಣ್ಣುಮಕ್ಕಳು ಕುಳಿತು ಸ್ನಾನ ಮಾಡಲು ಬಚ್ಚಲಿನ ನಡುವೆ ಒಂದು ಕಟ್ಟೆ, ಹೊಗೆ ಚಿಮಣಿ, ಬಟ್ಟೆ ಒಗೆಯುವ ಕಲ್ಲು, ಇಂಡಿಯನ್ ಮಾದರಿ ಕಕ್ಕಸು ಎಲ್ಲವೂ ಅಲ್ಲಿದ್ದವು. ಇದರ ಜೊತೆ ಹಿರಿಯಜ್ಜನು ಮೈ ಕೈ ಉಜ್ಜಿಕೊಳ್ಳಲು ಇಟ್ಟುಕೊಂಡಿದ್ದ ಒಂದೆರಡು ಚಪ್ಪಟೆ ಕಲ್ಲುಗಳು, ತೆಂಗಿನ ನಾರು, ಬೇವಿನ ಕಡ್ಡಿ, ಕಡ್ಲೆ ಹಿಟ್ಟು ಇತ್ಯಾದಿ. ಅಜ್ಜ ಯಾವುದೇ ಸೋಪು ಬಳಸುತ್ತಿರಲಿಲ್ಲ. ಅಲ್ಲೇ ಒಂದು ಹಗ್ಗದ ಮೇಲೆ ಯಾವಾಗಲೂ ಹಿರಿಯಜ್ಜನ ಪಟಾಪಟಿ ಚಡ್ಡಿ ಮತ್ತು ಬನೀನುಗಳು ಹರಡಿಕೊಂಡು ಒಣಗುತ್ತಿರುತ್ತಿದ್ದವು. ಆ ರೂಮಿನ ನೆಲಕ್ಕೆ ದೊಡ್ಡ ಬಂಡೆಗಳನ್ನು ಮಟ್ಟಸವಾಗಿ ಹಾಕಿ ಒರಟೊರಟಾಗಿ ಗಾರೆ ಕೆಲಸ ಮಾಡಿದ್ದರು. ಹಿರಿಯಜ್ಜ ಅಲ್ಲಿ ಗಂಟೆಗಟ್ಟಲೆ ಸುಖವಾಗಿ ಸ್ನಾನ